ಅವಕಾಶ ಈ ಹಿಂದೆ ಜಾರಿಯಲ್ಲಿದ್ದುದು ನಿಜವೇ? ಹಾಗಿದ್ದಲ್ಲಿ ಈ ಅವಕಾಶವನ್ನು ಎಂದು ರದ್ದುಪಡಿಸಲಾಗಿದೆ? ರದ್ದುಪಡಿಸಲು ಕಾರಣಗಳೇನು?

ಆ) ಡಿಪ್ಲೋಮಾ ಪರೀಕ್ಷೆಗಳಲ್ಲಿ ಮೌಲ್ಯ ಮಾಪನದ ನಂತರ ಅಭ್ಯರ್ಥಿಗಳಿಗೆ ಈ ರೀತಿ ಅವಕಾಶ ಇರುವುದು ನಿಜವಲ್ಲವೇ? ಹಾಗಿದ್ದಲ್ಲಿ ಶಿಕ್ಷಣ ಇಲಾಖೆಯು ಪಿಯುಸಿ ಮತ್ತು ಎಸ್.ಎಸ್.ಎಲ್.ಸಿ. ಪರೀಕ್ಷೆಗಳಲ್ಲಿ ಉತ್ತರ ಪತ್ರಿಕೆಗಳನ್ನು ವೀಕ್ಷಿಸುವ ಅವಕಾಶವನ್ನು ನಿಗಧಿತ ಶುಲ್ಕದೊಂದಿಗೆ ಪರಿಶೀಲಿಸಲು ಪುನಃ ಜಾರಿಗೆ ತರಲಾಗುವುದೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಆ) ಎಸ್.ಎಸ್.ಎಲ್.ಸಿ ಪರೀಕ್ಷೆಗಳ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ : ಇಡಿ 34 ಎಸ್ಎಕ್ಸ್ಎಂ 82, ದಿನಾಂಕ : 31-10-87ರ ಅನ್ವಯ ಅಭ್ಯರ್ಥಿಗಳ ಕೋರಿಕೆಯ ಮೇರೆಗೆ ಶುಲ್ಕದೊಂದಿಗೆ ಮೌಲ್ಯಮಾಪನವಾದ ಉತ್ತರಪತ್ರಿಕೆಯನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳ ಸಮ್ಮುಖದಲ್ಲಿ ನೋಡಲು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿತ್ತು. ಆದರೆ ಸಾಕಷ್ಟು ಆಡಳಿತಾತ್ಮಕ ಸಮಸ್ಯೆಗಳು ಉದ್ಭವಿಸುವಬಹುದಾದ ಹಿನ್ನೆಲೆಯಲ್ಲಿ ಈ ಆದೇಶವನ್ನು ಜಾರಿಗೊಳಿಸಲಾಗಿಲ್ಲ.

ಪಿ.ಯು.ಸಿ. ಪರೀಕ್ಷೆಯ ಮೌಲ್ಯಮಾಪನಗೊಳಿಸಿದ ಉತ್ತರಪತ್ರಿಕೆಗಳನ್ನು ಅಭ್ಯರ್ಥಿಗಳ ಕೋರಿಕೆ ಮೇರೆಗೆ ಶುಲ್ಕದೊಂದಿಗೆ ವೀಕ್ಷಿಸುವ ಅವಕಾಶ ಜಾರಿಯಲ್ಲಿರಲಿಲ್ಲ.

ಆ) ಡಿಪ್ಲೋಮಾ ಪರೀಕ್ಷೆಗಳಲ್ಲಿ ಮೌಲ್ಯಮಾಪನದ ನಂತರ ಅಭ್ಯರ್ಥಿಗಳಿಗೆ ವೀಕ್ಷಿಸುವ ಅವಕಾಶವಾಗಲಿ ಅಥವಾ ಮರು ಮೌಲ್ಯಮಾಪನ ಮಾಡಿಸುವ ಅವಕಾಶವಾಗಲಿ ಇರುವುದಿಲ್ಲ. ಆಡಳಿತಾತ್ಮಕ ತೊಂದರೆಗಳು ಉದ್ಭವಿಸುವ ಹಿನ್ನೆಲೆಯಲ್ಲಿ ಈ ಸೌಲಭ್ಯವನ್ನು ಪುನಃ ಜಾರಿಗೆ ತರಲಾಗುವುದಿಲ್ಲ.

ರಾಜ್ಯದಲ್ಲಿರುವ ಗ್ರಂಥಾಲಯಗಳು

67 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಿಲ್ಲಾವಾರು ಗ್ರಂಥಾಲಯ ವಾಚನಾಲಯಗಳ ಸಂಖ್ಯೆ ಹಾಗೂ 91-92, 92-93 ಮತ್ತು 1993-94ರಲ್ಲಿ ನಿಗಧಿಪಡಿಸಿದ, ಖರ್ಚು ಮಾಡಿದ ಹಾಗೂ ಖರ್ಚುಮಾಡದೇ ಉಳಿದಿರುವ ಹಣ ಎಷ್ಟು?

ಆ) ಈ ಗ್ರಂಥಾಲಯ ಹಾಗೂ ವಾಚನಾಲಯಗಳಿಗೆ ಯಾವ ಯಾವ ಪತ್ರಿಕೆಗಳನ್ನು ತರಿಸಲು ಆದೇಶ ಕೊಡಲಾಗಿದೆ?

ಇ) ಪತ್ರಿಕೆಗಳು ಬಾರದೇ, ಓದುವ ಅವಕಾಶ ಇಲ್ಲದೇ ಇರುವ ಗ್ರಂಥಾಲಯಗಳ ಸಂಖ್ಯೆ ಎಷ್ಟು?

ಈ) ಧಾರವಾಡ ಜಿಲ್ಲಾ ಹಿರೇಕೆರೂರು ತಾಲ್ಲೂಕು ಚಿಕ್ಕೆರೂರ ಗ್ರಂಥಾಲಯಕ್ಕೆ ಪತ್ರಿಕೆಗಳು ಬಾರದೇ ಎಷ್ಟು ತಿಂಗಳಾಗಿವೆ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ)

	ಶಾ.ಗ್ರಂ.	ಗ್ರಾಂ.ಪಂ.ಗ್ರಂ.	ಪು.ವಿ. ಕೇಂದ್ರ
	297	851	297
	1991-92	1992-93	1993-94
ಹಂಚಿಕೆ :	14,78,000	16,32,000	17,32,000

ವೆಚ್ಚ :	14,58,840	16,28,879	14,81,283
ಉಳಿತಾಯ :	19,160	3,121	2,50,717

ಆ) ರಾಜ್ಯದಲ್ಲಿರುವ ಪ್ರಮುಖ ಪತ್ರಿಕೆಗಳಾದ ಕನ್ನಡಪ್ರಭ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಉದಯವಾಣಿ ದಿನಪತ್ರಿಕೆಗಳೊಂದಿಗೆ ಆಯಾ ಸ್ಥಳೀಯ ದಿನಪತ್ರಿಕೆಗಳು, ಮತ್ತು ವಾರಪತ್ರಿಕೆಗಳಾದ ಸುಧಾ, ತರಂಗ,ಲಂಕೇಶ್ ಪತ್ರಿಕೆ, ಚಂದಮಾಮ, ಮಯೂರ, ತುಷಾರ, ಮಲ್ಲಿಗೆ, ಕಸ್ತೂರಿ, ರೂಪತಾರ ಇವುಗಳನ್ನು ಸಾರ್ವಜನಿಕರ ಕೋರಿಕೆಯಂತೆ ಸರಬರಾಜು ಮಾಡಲು ಆದೇಶ ನೀಡಲಾಗಿದೆ.

ಇ) 12

ಈ) 11 ತಿಂಗಳು

ರಾಜ್ಯದಲ್ಲಿ ಮಕ್ಕಳ ಜನನ, ಮರಣದ ಬಗ್ಗೆ

147 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಸಮಯದಲ್ಲಿ ಒಂದು ಮಗು ಜನನವಾಗುತ್ತದೆ?

ಆ) ಹಾಗೂ ಎಷ್ಟು ಅವಧಿಯಲ್ಲಿ ಒಂದು ಮಗು ಸಾಯುತ್ತದೆ.

ಇ) ಹತ್ತು ವರ್ಷಗಳ ಹಿಂದೆ ಈ ಪ್ರಮಾಣ ಎಷ್ಟು ಇತ್ತು?

ಈ) ಇಂದಿನ ಈ ಸ್ಥಿತಿಗೆ ತಲುಪಬೇಕಾದರೆ ನಾವು ಕೈಗೊಂಡಿರುವ ವೆಚ್ಚ ಎಷ್ಟು?

ಡಾ॥ ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಪ್ರತಿ 25.77 ಸೆಕೆಂಡಿಗೆ ಒಂದು ಮಗು ಜನನವಾಗುತ್ತದೆ.

ಆ) ಪ್ರತಿ 5.88 ನಿಮಿಷಕ್ಕೆ ಒಂದು ಮಗು ಸಾಯುತ್ತದೆ.

ಇ) ಹತ್ತು ವರ್ಷಗಳ ಹಿಂದೆ ಪ್ರತಿ 25.83 ಸೆಕೆಂಡಿಗೆ ಒಂದು ಮಗುವಿನ ಜನನ ಹಾಗೂ ಪ್ರತಿ 5.82 ನಿಮಿಷಕ್ಕೆ ಒಂದು ಮಗುವಿನ ಮರಣವಾಗುತ್ತಿತ್ತು.

ಈ) 1983-84ನೇ ಸಾಲಿನಿಂದ 1993-94ನೇ ಸಾಲಿನವರೆಗೂ ಕುಟುಂಬ ಕಲ್ಯಾಣ ಮತ್ತು ತಾಯಿ ಮಕ್ಕಳ ಆರೋಗ್ಯ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಸುಮಾರು 369.00 ಕೋಟಿ ಹಣವನ್ನು ವೆಚ್ಚ ಮಾಡಲಾಗಿದೆ.

ಖಾಸಗಿ ಸಂಸ್ಥೆಗಳ ಉಪಾಧ್ಯಾಯರಿಗೆ ತರಬೇತಿ ಕೇಂದ್ರ

118 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗಿ ಸಂಸ್ಥೆಗಳು ನಡೆಸುತ್ತಿರುವ ಉಪಾಧ್ಯಾಯರ ತರಬೇತಿ ಕೇಂದ್ರ (ಟಿ.ಸಿ.ಹೆಚ್) ಗಳೆಷ್ಟು?

ಆ) ಮಾನ್ಯತೆ ಪಡೆದಿರುವ ಉಪಾಧ್ಯಾಯರ ತರಬೇತಿ ಕೇಂದ್ರಗಳೆಷ್ಟು?

ಇ) ಮಾನ್ಯತೆ ಪಡೆಯದಿರುವ ಉಪಾಧ್ಯಾಯರ ತರಬೇತಿ ಕೇಂದ್ರಗಳೆಷ್ಟು?

ಈ) ಮಾನ್ಯತೆ ದೊರೆಯದಿರುವ ಸಂಸ್ಥೆಗಳೆಷ್ಟು?

ಉ) ಮಾನ್ಯತೆ ಕೊಡದಿರಲು ಕಾರಣಗಳೇನು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) 148